ದಿನಾಂಕ: ಮಾರ್ಚ್ ೧೦,೨೦೧೪

# ‘ಪುಣ್ಯವು’ ‘ಪಾಪವನ್ನು’ ಸಂಧಿಸಿದಾಗ

–ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

೨೦೧೪ರ ಸಾರ್ವತ್ರಿಕ ಚುನಾವಣೆಗೆ ಮುನ್ನ, ಕಳೆದ ೨೪ ತಾಸುಗಳು ಮಹತ್ವಪೂರ್ಣ ಬೆಳವಣಿಗೆಗಳು ಘಟಿಸಿದವು. ಭಾಜಪ ಬಲವರ್ಧನೆ ಮುಂದುವರಿದಿದೆ. ಡಾರ್ಜಿಲಿಂಗ್ ಹಾಗೂ ಉತ್ತರ ಬಂಗಾಳದ ಮತಕ್ಷೇತ್ರಗಳಲ್ಲಿ ಗೋರ್ಖಾ ಜನಮುಕ್ತಿ ಮೋರ್ಚಾ ಪಕ್ಷವು ಭಾಜಪಗೆ ಸಮರ್ಥನೆ ನೀಡಲು ಒಪ್ಪಿದೆ. ಭಾಜಪ ಗೆಲುವಿಗೆ ಮತ್ತಷ್ಟು ಶಕ್ತಿ ತುಂಬಿದಂತಾಗಿದೆ. ಬಂಗಾಳದಲ್ಲಿ ಕೆಲವು ಸ್ಥಾನಗಳನ್ನು ಗೆಲ್ಲಲು ಇದರಿಂದ ಸಾಧ್ಯವಾಗಲಿದೆ. ಜೊತೆಗೆ, ಅಸ್ಸಾಂ ಗಣ ಪರಿಷತ್‌ನ ಮಾಜಿ ಅಧ್ಯಕ್ಷರಾದ ಚಂದ್ರ ಮೋಹನ್ ಪಟ್ವಾರಿ ಅವರು ಭಾಜಪ ಸೇರಲು ನಿರ್ಧರಿಸಿದ್ದು, ಇದರಿಂದ ಆ ಪಕ್ಷದ ಬಹು ಭಾಗ ಭಾಜಪ ಸೇರಲಿದೆ. ಎಜಿಪಿಯ ಪ್ರಮುಖ ನಾಯಕರು ಭಾಜಪ ಸೇರುವುದರಿಂದ ಅಸ್ಸಾಂನಲ್ಲಿ ಭಾಜಪ ಏಕೈಕ ಕಾಂಗ್ರೆಸ್ ಏತರ ಪಕ್ಷವಾಗಿ ಹೊರಹೊಮ್ಮಲಿದೆ.

ಈ ಬೆಳವಣಿಗೆ ಅಲ್ಲದೆ, ಹಲವು ರಾಜ್ಯಗಳಲ್ಲಿ ತಮ್ಮ ಪಕ್ಷವನ್ನು ತೊರೆದು ಭಾಜಪ ಸೇರುತ್ತಿರುವ ಹಲವಾರು ನಾಯಕರು ಪಕ್ಷದ ಬಲವರ್ಧನೆಗೆ ಕಾರಣವಾಗಿದ್ದು, ಕರ್ನಾಟಕ, ಆಂಧ್ರಪ್ರದೇಶ ಹಾಗೂ ತಮಿಳುನಾಡಿನ ಈ ಮೂರು ದಕ್ಷಿಣ ರಾಜ್ಯಗಳಲ್ಲಿ ಈ ಪ್ರಕ್ರಿಯೆ ಮುಂದುವರೆಯುವ ಕಾರಣ ಭಾಜಪ ಹಾಗೂ ಎನ್‌ಡಿಎ ಬಲವರ್ಧನೆಗೆ ಮುಂಬರುವ ದಿವಸಗಳು ಪ್ರಮುಖವಾಗಿವೆ. ಸಾಂಪ್ರದಾಯಿಕವಾಗಿ ಭಾರತದ ಪೂರ್ವ ಹಾಗೂ ದಕ್ಷಿಣ ಭಾಗಗಳಲ್ಲಿ ಬಲಿಷ್ಠ ರಾಜಕೀಯ ಶಕ್ತಿ ಆಗಿರದ ಭಾಜಪಗೆ ಈ ಬೆಳವಣಿಗೆಗಳು ಶಕ್ತಿ ತುಂಬಲಿವೆ.

ಇದರೊಂದಿಗೆ, ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಾರ್ಟಿಯಲ್ಲಿ ಪ್ರಮುಖ ಬೆಳವಣಿಗೆಗಳು ಗತಿಸಿವೆ. ಮಧ್ಯಪ್ರದೇಶದ ಭಿಂಡ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ತುಂಬಲು ನಿರಾಕರಿಸಿದ್ದಾರೆ. ಜೊತೆಗೆ ಭಾಜಪ ಸೇರಲು ನಿರ್ಧರಿಸಿದ್ದಾರೆ. ಚಂಡಿಗಡದಲ್ಲಿ ತಮಗೆ ಸಮರ್ಪಕ ಬೆಂಬಲವಿದೆ ಎಂದು ಎಎಪಿ ಹೇಳಿಕೊಂಡಿತ್ತು. ಆದರೆ ಪಕ್ಷದ ನಾಮಪತ್ರ ಹಿಂದಿರುಗಿಸಲು ಅವರ ಚಂಡಿಗಡ ಅಭ್ಯರ್ಥಿ ನಿರ್ಧರಿಸಿದ್ದು, ಚುನಾವಣೆಗೆ ಅಗತ್ಯ ಸಂಘಟನಾ ಶಕ್ತಿ ಹಾಗೂ ಸುಸಜ್ಜಿತ ಕಾರ್ಯಕರ್ತರ ಪಡೆ ತಮ್ಮಲಿಲ್ಲವೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಗೆಲುವಿನ ಸಾಮರ್ಥ್ಯವಿರುವ ಪಕ್ಷದ ಸುತ್ತ ಜನರ ಸಂದಣಿ ಹೆಚ್ಚುವುದು ಸ್ವಾಭಾವಿಕ. ಸೋಲಿನ ದಾರಿ ಹಿಡಿದ ಪಕ್ಷಕ್ಕೆ ಬೆಂಬಲ ವಿರಳ. ಆದರೂ, ಅಭ್ಯರ್ಥಿಯ ಹೆಸರುಗಳನ್ನು ಪ್ರಕಟಿಸಿದ ನಂತರ, ಪಕ್ಷದ ನಾಮಪತ್ರವನ್ನು ತಿರಸ್ಕರಿಸುವ ಅಭ್ಯರ್ಥಿಗಳ ನಡೆ ಹಿಂದೆಂದು ಸಂಭವಿಸಿರಲಿಲ್ಲ. ಗೆಲ್ಲುವ ಸಂಭಾವನೆ ಕಾಣದೆ ಇರುವಾಗ ಮಾತ್ರ ಈ ರೀತಿಯ ನಡವಳಿಕೆ ಸಾಧ್ಯ.

ಆಮ್ ಅದ್ಮಿ ಪಾರ್ಟಿಗೆ ಮಾಧ್ಯಮಗಳಿಂದ ದೊರೆಯುತ್ತಿದ್ದ ಪ್ರಚಾರ ಆಧ್ಯತೆ ತಗ್ಗಿದೆ. ಆ ಪಕ್ಷದ ಚಟುವಟಿಕೆಗಳನ್ನು ಮಾಧ್ಯಮಗಳು ಈಗಲೂ ವ್ಯಾಪಕ ವರದಿ ಮಾಡುತ್ತಿವೆಯಾದರೂ, ಈಗ ಅನ್ಯ ರಾಜಕೀಯ ಪಕ್ಷಗಳಂತೆ ಎಎಪಿ ಪಕ್ಷವನ್ನೂ ಅಳೆಯುವ ವರದಿಗಳು ಕಾಣಿಸುತ್ತಿವೆ.

ಕಾಂಗ್ರೆಸ್ ಬದಲು ಎಎಪಿ ಪಕ್ಷವೇ ಭಾಜಪಗೆ ಸಡ್ಡು ಹೊಡೆದ ಪ್ರಮುಖ ವಿರೋಧ ಪಕ್ಷವೆಂಬ ಭಾವನೆಯನ್ನು ವ್ಯಾಪಕ ಮಾಧ್ಯಮ ಪ್ರಚಾರ ಮೂಡಿಸಿತ್ತು. ಯು ಟ್ಯೂಬ್‌ನಲ್ಲಿ ಸ್ವಾರಸ್ಯಕರ ವೀಡಿಯೊ ಒಂದನ್ನು ಬಿತ್ತರಿಸಲಾಗಿದೆ. ಅದರಲ್ಲಿ ಸುದ್ದಿ ವಾಹಿನಿಯ ಸಂದರ್ಶಕನೊಂದಿಗೆ ಎಎಪಿ ಪಕ್ಷದ ಅಧ್ಯಕ್ಷರು ಗುಪ್ತ ಸಮಾಲೋಚನೆ ನಡೆಸುತ್ತಿರುವ ದೃಶ್ಯಾವಳಿಗಳಿವೆ. ತಮ್ಮ ಸಂದರ್ಶನದಲ್ಲಿ ಮೂಡಿದ ವಿಚಾರಗಳು ಜನರ ಮೇಲೆ ಮೂಡಿಸುವ ಪ್ರಭಾವದ ಕುರಿತು ಇಬ್ಬರು ಚರ್ಚಿಸುತ್ತಿದ್ದಾರೆ. ಸಂದರ್ಶನದ ಯಾವ ಭಾಗವನ್ನು ಹೆಚ್ಚು ತೋರಿಸಬೇಕು ಹಾಗೂ ಮಧ್ಯಮವರ್ಗದ ವೋಟುಗಳನ್ನು ಕಸಿಯುವ ಭಾಗವನ್ನು ತಗ್ಗಿಸುವ ಕುರಿತು ಚರ್ಚಿಸಲಾಯಿತು. ಸಂದರ್ಶನದಲ್ಲಿ ಯಾವ ಭಾಗವನ್ನು ತೋರಿಸಬೇಕು ಮತ್ತು ಯಾವುದನ್ನು ತೋರಿಸಬಾರದು ಎಂಬ ಸೌಲಭ್ಯವನ್ನು ಯಾವುದೇ ದೃಷ್ಯ ಮಾಧ್ಯಮ ನಮಗೆ ನೀಡಿಲ್ಲ. ನಿರ್ದಿಷ್ಟ ಛಾಪು ಮೂಡಿಸುವ ಸ್ನೇಹಪರ ಮತ್ತು ಒಪ್ಪಂದದ ಸಂದರ್ಶನ ಏರ್ಪಡಿಸುವ ತಂತ್ರಗಾರಿಕೆಯನ್ನು ಎಎಪಿ ರೂಢಿಸಿಕೊಂಡಿದೆ. ತಮ್ಮ ನೈಜ ಚಹರೆಗೆ ಜನಪರ ಮುಖವಾಡ ಹಾಕುವ ಪ್ರಯತ್ನವನ್ನು ಪಕ್ಷವು ಮಾಡುತ್ತಿದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ. ಅವರು ಮೂಡಿಸಲು ಯತ್ನಿಸುತ್ತಿರುವ ಛಾಪು ಸ್ವಾಭಾವಿಕವಾದದ್ದಲ್ಲ. ಸತ್ಯಾಂಶ ಹಾಗೂ ಕೃತಕವಾಗಿ ಸೃಷ್ಟಿಸುತ್ತಿರುವ ಛಾಪಿನ ನಡುವೆ ತಾಳಮೇಳವಿಲ್ಲ. ಪುಣ್ಯವು ಪಾಪವನ್ನು ಸಂಧರ್ಶಿಸಿದಾಗ ಸಂಚಿನ ಕಲ್ಪನೆ ಮೂಡುವುದಿಲ್ಲ.

✲✲✲✲✲